**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 2

| | |
|---|---|
| ಸಾಕ್ಷಿದಾರರ ಹೆಸರು | ರಶೀದ್ |
| ತಂದೆಯ ಹೆಸರು | ಅಹಮದ್ ಸಾಹೇಬ್ |
| ವಯಸ್ಸು | 52 ವರ್ಷ |
| ಉದ್ಯೋಗ | ಮನೆ ಕೆಲಸ |
| ವಿಳಾಸ | ಹೆಜಮಾಡಿ, ಪಡುಬಿದ್ರೆ |

ದಿನಾಂಕಃ 05-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಹೆಜಮಾಡಿಯ ಎಸ್.ಎಸ್ ರಸ್ತೆಯಲ್ಲಿರುವ ಕರ್ನಿರೆ ಮಸೀದಿಗೆ ಸಂಬಂಧಪಟ್ಟ ಕಟ್ಟಡದಲ್ಲಿ ಬಾಡಿಗೆಗೆ ವಾಸವಾಗಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರು ನನ್ನ ಪಕ್ಕದ ಮನೆಯವರು. ಅವರು ಜಾರ್ಖಂಡನವರು. ಮೃತ ಸದಾಕತ್ ಅನ್ಸಾರಿ 1 ನೇ ಆರೋಪಿಯ ಗಂಡ ಮತ್ತು 2 ನೇ ಅರೋಪಿ ಯ ಅಣ್ಣ. ಮೃತನಿಗೆ ನಾಲ್ಕು ಜನ ಮಕ್ಕಳು. ಅವರೆಲ್ಲಾ ಆರೋಪಿತರೊಂದಿಗೆ ವಾಸವಾಗಿದ್ದರು. ಮೃತ ಮತ್ತು 2 ನೇ ಆರೋಪಿ ಟೈಲ್ಸ ಹಾಕುವ ಕೆಲಸ ಮಾಡುತ್ತಿದ್ದರು ಎಂದು ಗೊತ್ತು. ಚಾಸಾ -3, 1 ನೇ ಅರೋಪಿ ಮತ್ತು ಮೃತನ ಮಗ. ಚಾಸಾ-5 ಮತ್ತು 8 ಇವರು ಸಹ ನನ್ನ ಪಕ್ಕದ ಮನೆಯವರು. ನನಗೆ ಚಾಸಾ-6 ಮತ್ತು 7 ರವರ ಪರಿಚಯ ಇಲ್ಲ. 1 ನೇ ಅರೋಪಿ ಗಂಡ ಸುಮಾರು 4 ವರ್ಷಗಳ ಹಿಂದೆ ತೀರಿದ್ದರು.

2) ಸುಮಾರು 4-5 ವರ್ಷಗಳ ಹಿಂದೆ ರಾತ್ರಿಯ 12-30 ಗಂಟೆಯ ಸಮಯದಲ್ಲಿ, ನಮ್ಮ ಮನೆಯ ಬಾಗಿಲನ್ನು ಆರೋಪಿತರು ತಟ್ಟಿದ್ದರು. ನಾನು ಬಾಗಿಲು ತೆಗೆದಿದ್ದೆ. ಆಗ 2 ನೇ ಆರೋಪಿ ತನ್ನ ಅಣ್ಣ ಕಾಣೆಸುತ್ತಿಲ್ಲ ಮತ್ತು 1 ನೇ ಆರೋಪಿಯ ಗಂಡ ಕಾಣೆಸುತ್ತಿಲ್ಲ ಎಂದು ಹೇಳಿದ್ದರು ಮತ್ತು ಕೆಲಸಕ್ಕೆ ಹೋಗಿದ್ದ

ಅವರು ಮರಳಲಿಲ್ಲ ಎಂದು ಹೇಳಿದ್ದರು ಮತ್ತು ಹುಡುಕಲು ಹೋಗಲು ನನ್ನನ್ನು ಕರೆದಿದ್ದರು. ನಾನು ಆರೋಗ್ಯ ಸರಿ ಇಲ್ಲ ಎಂದು, ನಾನು ಬರುವುದಿಲ್ಲ ಎಂದು ಹೇಳಿದ್ದೆ. ಅದೇ ಸಮಯ ಚಾಸಾ -8 ನನ್ನ ಬಳಿಯ ಬಂದಿದ್ದರು. ಅವರೂ ಸಹ ನಮ್ಮನ್ನು ಅಲ್ಲಿ ಕರೆಸಿದ್ದರು, ಆಗ 2 ನೇ ಆರೋಪಿ ಚಾಸಾ -8 ಇವರೊಂದಿಗೆ ಹುಡುಕಲು ಹೋಗಿದ್ದರು. ಮಾರನೇ ದಿನ ಬೆಳಿಗ್ಗೆ 8 ಗಂಟೆಯ ಸಮಯದಲ್ಲಿ ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿ ಚಾಸಾ -8 ಸಿಕ್ಕಿದ್ದರು. ಅವರು ನನಗೆ ಹೇಳಿದಂತೆ 1 ನೇ ಅರೋಪಿಯ ಗಂಡ ಇವರು ಹೆಜಮಾಡಿಯ ಗುಂಡಿ ರಸ್ತೆಯ ತೋಡಿನಲ್ಲಿ ಬಿದ್ದಿದ್ದರು ಎಂದು ತಿಳಿಸಿದ್ದರು. ಮತ್ತು ಅಲ್ಲಿ ಸ್ಕೂಟರ್ ಸಹ ಬಿದ್ದಿತ್ತು ಎಂದು ತಿಳಿಸಿದ್ದರು. ಮಾರನೇ ದಿನ ಪೊಲೀಸರು ಬಂದು ನನ್ನನ್ನು ವಿಚಾರಿಸಿದ್ದರು. ಮೃತನ ಸಾವಿಗೆ ಏನು ಕಾರಣ ಎಂದು ನಾನು ತಿಳಿದುಕೊಂಡಿಲ್ಲ. ಆರೋಪಿತರು ಅವರ ಮನೆಯಲ್ಲಿ ಹೇಗೆ ಇದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರನ್ನು ದಸ್ತಗಿರಿ ಮಾಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ನನ್ನ ಹೇಳಿಕೆ ಪಡೆದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**<u>ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1) ದಿನಾಂಕ 21-05-2020 ರಂದು ರಾತ್ರಿ ನಾನು ಮನೆಯಲ್ಲಿ ಮಲಗಿದ್ದಾಗ ರಾತ್ರಿ 12-30 ಗಂಟೆಯ ಸಮಯದಲ್ಲಿ ನಮ್ಮ ಮನೆಯು ಪಕ್ಕದಲ್ಲಿ ಯಾರೋ ನಡೆದು ಹೋಗುವ ಶಬ್ದ ಕೇಳಿ, ನಾನು ಕಿಟಕಿಯಿಂದ ನೋಡಿದಾಗ ದೂರದಲ್ಲಿ ಸ್ಕೂಟಿಯನ್ನು ತಳ್ಳಿಕೊಂಡು ಹೋಗುತ್ತಿರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ವಠಾರದ ಬಾಡಿಗೆ ಮನೆಯವರು ಯಾರೋ ಹೋಗಿರಬಹುದು ಎಂದು ಭಾವಿಸಿ ನಾನು ಮಲಗಿದ್ದೆ ಎಂದರೆ ಸರಿಯಲ್ಲ. ದಿನಾಂಕ 22-05-2020 ರಂದು ಚಾಸಾ -8 ರವರನ್ನು ನಾನು ಹಿಂದಿನ ದಿನದ ರಾತ್ರಿಯ ಘಟನೆಯ ಬಗ್ಗೆ ವಿಚಾರಿಸಿದಾಗ, ತಾನು ಹಾಗೂ 2 ನೇ ಅರೋಪಿ ಮೃತನನ್ನು ಹುಡುಕಲು

ಹೋದಾಗ, ಹೆಜಮಾಡಿಯ ಗುಂಡಿಯ ತೋಡಿನಲ್ಲಿ ಮೃತ ಹಾಗೂ ಸ್ಕೂಟರ್ ಬಿದ್ದಿರುವುದನ್ನು ನೋಡಿ, ವಾಪಾಸು ಮನೆಯ ಬಳಿ ಬಂದು, ಚಾಸಾ-5 ರವರನ್ನು ಎಬ್ಬಿಸಿ , ಅವರ ಕಾರಿನಲ್ಲಿ ಸ್ಥಳಕ್ಕೆ ಹೋಗಿ, ತೋಡಿನಲ್ಲಿ ಬಿದ್ದಿದ್ದ ಮೃತನನ್ನು ಕಾರಿನಲ್ಲಿ ಹಾಕಿಕೊಂಡು ಪಡುಬಿದ್ರೆಯ ಸಿದ್ದಿವಿನಾಯಕ ಆಸ್ಪತ್ರೆಗೆ ಹೋಗಿ , ಅಲ್ಲಿಂದ ಉಡುಪಿ ಜಿಲ್ಲಾ ಆಸ್ಪತ್ರೆಗೆ ಹೋಗಿ, ಅಲ್ಲಿಂದ ಕೆಎಂಸಿ ಆಸ್ಪತ್ರೆಗೆ ಹೋದಾಗ,ಅಲ್ಲಿಯ ವೈದ್ಯರು ಆತ ಮೃತಪಟ್ಟಿರುವುದಾಗಿ ತಿಳಿಸಿದ್ದರಿಂದ ಮಣಿಪಾಲ ಆಸ್ಪತ್ರೆಯ ಶವಾಗಾರದಲ್ಲಿ ಆತನನ್ನು ಶವವನ್ನು ಇಟ್ಟು ಬಂದಿರುವುದಾಗಿ ನನಗೆ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ 2 ನೇ ಅರೋಪಿ ತನ್ನ ಅಣ್ಣ ಅಪಘಾತದಲ್ಲಿ ಮೃತಪಟ್ಟಿರುವುದಾಗಿ ದೂರು ಕೊಟ್ಟಿರುವ ವಿಚಾರ ನನಗೆ ತಿಳಿಸಿದ್ದನು ಎಂದರೆ ಸರಿಯಲ್ಲ ಮತ್ತು ಆತ 2 ನೇ ಅರೋಪಿಯ ಆತನ ಅಣ್ಣನ ಸಾವಿಗೆ ಸಂಬಂಧಪಟ್ಟಂತೆ ಸಂಶಯಪಟ್ಟಿದ್ದನು ಎಂದು ತಿಳಿದಿತ್ತು ಎಂದರೆ ಸರಿಯಲ್ಲ. ದಿನಾಂಕ 21-05-2020 ರಂದು ಚಾಸಾ -1 ಸಹ, 1 ಮತ್ತು 2 ನೇ ಆರೋಪಿತರನ್ನು ಮಧ್ಯರಾತ್ರಿ ಸಮಯದಲ್ಲಿ ಸ್ಕೂಟಿಯಲ್ಲಿ ಹೋಗುವುದನ್ನು ನೋಡಿ, ಮೃತನ ಸಾವಿಗೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದನು ಎಂಬುದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ದಿನಾಂಕ 21-05-2020 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ಮೃತನು ಮತ್ತು 1 ನೇ ಅರೋಪಿಯ ನಡುವೆ ಮಕ್ಕಳ ವಿಷಯವಾಗಿ ತಂಟೆಯಾಗಿ,ಮೃತನು 1 ನೇ ಆರೋಪಿಗೆ ಹಲ್ಲೆ ಮಾಡಲು ಹೋದಾಗ, 1 ನೇ ಅರೋಪಿ ದೂಡಿದ್ದರಿಂದ, ಗೋಡೆಗೆ ಬಿದ್ದು, ಪೆಟ್ಟಾಗಿ ಮೃತಪಟ್ಟಿದ್ದನು ಎಂದು ತಿಳಿದಿತ್ತು ಎಂದರೆ ಸರಿಯಲ್ಲ. ನಂತರ 1 ಮತ್ತು 2 ನೇ ಆರೋಪಿತರುಸ್ಕೂಟಿಯಲ್ಲಿ ಮೃತನನ್ನು ಕುಳ್ಳಿರಿಸಿಕೊಂಡು ಹೆಜಮಾಡಿಯ ಗುಂಡಿ ರಸ್ತೆಯಲ್ಲಿರುವ ತೋಡಿಗೆ ಸ್ಕೂಟರನ್ನು ಹಾಗೂ ಮೃತನನ್ನು ತಳ್ಳಿ, ಅಪಘಾತವಾಗಿದೆ ಎಂದು ನಾಟಕವಾಡಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ ಹಾಗೂ 1 ನೇ ಆರೋಪಿ ತನ್ನ ಅಣ್ಣ ಅಪಘಾತದಲ್ಲಿ ಮೃತಪಟ್ಟಿರುವುದಾಗಿ ಸುಳ್ಳು ದೂರು ನೀಡಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯದ ಬಗ್ಗೆ ನಾನು ದಿನಾಂಕ 26-05-2020 ರಂದು ಈಗ ನನಗೆ ಓದಿ ಹೇಳಿದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-4 ಎಂದು ಗುರುತಿಸಿದೆ.

2) ಮೃತನ ಸಾವಿನ ಬಗ್ಗೆ ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಅವರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ಅರೋಪಿಯ ಮನೆಯಲ್ಲಿ ಆದ ಗಲಾಟೆ ನಮಗೆ ಕೇಳಿಸುತ್ತದೆ ಎಂದರೆ , ನಮಗೆ ಗೊತ್ತಾಗುವುದಿಲ್ಲ. ಮೃತನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ಆರೋಪಿತರು ನಮ್ಮ ಮನೆಯ ಬಳಿ ಇಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ